Avantika
Centre for Decentralized Local Governance

# ಪಂಚಾಯಿತಿ ಧ್ವನಿ ತ್ರೈಮಾಸಿಕ ಪ್ರಕಟಣೆ

## ತಂಡದಿಂದ ಶುಭಾಶಯಗಳು

ವಿಕೇಂದ್ರೀಕೃತ ಸ್ಥಳೀಯ ಆಡಳಿತ ಕೇಂದ್ರ (ಸಿ.ಡಿ.ಎಲ್.ಜಿ) ಅವಂತಿಕಾ ಪ್ರತಿಷ್ಠಾನವು ಸ್ಥಳೀಯ ಆಡಳಿತ ಸಾಂಸ್ಥಿಕ ಅಭಿವೃದ್ಧಿಯ ಕೆಲಸ ಮಾಡುತ್ತಿದೆ. ಪ್ರಸ್ತುತ ಗ್ರಾಮ ಪಂಚಾಯಿತಿಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿದೆ. ನಾವು ನಿಜವಾದ ವಿಕೇಂದ್ರಿಕರಣವು ಪರಿಣಾಮಕಾರಿ ಸಾಂಸ್ಥಿಕ ಆಡಳಿತವನ್ನು ತರುತ್ತದೆಂಬುವುದರಲ್ಲಿ ನಂಬಿಕೆ ಇರಿಸಿದ್ದೇವೆ. ಸಾಂಸ್ಥಿಕ ಅಭಿವೃದ್ಧಿಯ ತತ್ವಗಳನ್ನು ಬಳಸಿ ಸಬಲೀಕರಣದ ಕಡೆ ಗಮನ ಇರಿಸಿದ್ದೇವೆ. ಅಂದರೆ ಸಂಸ್ಥೆಗಳ ಸಬಲೀಕರಣ.

ನಾವು ಈ ತ್ರೈಮಾಸಿಕ ಪ್ರಕಟಣೆಯನ್ನು ಸ್ಥಳೀಯ ಸರ್ಕಾರಗಳೊಡನೆ ಕೆಲಸ ಮಾಡುವಾಗ ಒಳನೋಟಗಳನ್ನು ನೀಡಲು ತರುತ್ತಿದ್ದೇವೆ. ತಳಹಂತದಿಂದ ಕುತೂಹಲಕಾರಿ ಕಥೆಗಳನ್ನು ಮತ್ತು ಕಲಿಕೆಗಳನ್ನು, ಸವಾಲುಗಳನ್ನು ಹಂಚಿಕೊಳ್ಳಲು ಹಾಗೂ ಸಿದ್ದಾಂತ ಮತ್ತು ಪಾಲಿಸಿಗಳನ್ನು ಹೇಗೆ ಸುಧಾರಣೆ ಮಾಡಬಹುದು ಎಂಬುದನ್ನು ತಿಳಿಸಬಯಸುತ್ತೇವೆ. ನಿಮ್ಮ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ಸ್ವಾಗತಿಸುತ್ತೇವೆ.

## ಮುಳಬಾಗಿಲು ಯೋಜನೆ

### ಗ್ರಾಮೀಣಾಭಿವೃದ್ಧಿ & ಪಂಚಾಯತ್ ರಾಜ್ ಇಲಾಖೆಯೊಡನೆ ಸಹಭಾಗಿತ್ವದಲ್ಲಿ:

ಮುಳಬಾಗಿಲು ಯೋಜನೆಯು ಕರ್ನಾಟಕ ರಾಜ್ಯದ ಗ್ರಾಮ ಪಂಚಾಯಿತಿ ಸಾಂಸ್ಥಿಕ ಸಬಲೀಕರಣದ ಕಡೆಗೆ ಮೊದಲ ಹೆಜ್ಜೆಯಾಗಿದೆ. ಇದು ವಿಕೇಂದ್ರೀಕೃತ ಸ್ಥಳೀಯ ಆಡಳಿತ ಕೇಂದ್ರ ಅಭಿವೃದ್ಧಿಪಡಿಸಿದ ಗ್ರಾಮ ಪಂಚಾಯಿತಿ ಸಾಂಸ್ಥಿಕ ಅಭಿವೃದ್ಧಿಯ ಚೌಕಟ್ಟಿನಿಂದ ಹುಟ್ಟಿಕೊಂಡಿದೆ. ಗ್ರಾಮ ಪಂಚಾಯಿತಿ ಸಾಂಸ್ಥಿಕ ಅಭಿವೃದ್ಧಿ ಚೌಕಟ್ಟು, ಗ್ರಾಮ ಪಂಚಾಯಿತಿಗಳು ಸಂವಿಧಾನದ 73ನೇ ತಿದ್ದುಪಡಿಯಲ್ಲಿ ತಮಗೆ ತಿಳಿಸುರವಂತೆ ಕಡ್ಡಾಯ ಪ್ರಕಾರ್ಯಗಳನ್ನು ನಿರ್ವಹಣೆ ಮಾಡಲು ಸಾಮರ್ಥ್ಯ ನೀಡುವುದಾಗಿದೆ.

ಮುಳಬಾಗಿಲು ಯೋಜನೆಯು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಹಾಗೂ ಅವಂತಿಕಾ ಪ್ರತಿಷ್ಠಾನದ ಜೊತೆಗಿನ 2 ವರ್ಷಗಳ ಸಹಭಾಗಿತ್ವವಾಗಿದೆ. ಇದರ ಜೊತೆಗೆ ಕೇಂದ್ರ ಸರ್ಕಾರದ ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನದ ಬೆಂಬಲವಿದೆ. ಇದನ್ನು 30.12.2014ರಂದು ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ವಿಕೇಂದ್ರೀಕೃತ ಸ್ಥಳೀಯ ಆಡಳಿತ ಕೇಂದ್ರದ ನಡುವಿನ ತಿಳುವಳಿಕೆಯ ಒಪ್ಪಂದವಾಗಿದೆ.



## ಸಹಭಾಗಿತ್ವದ ಉದ್ದೇಶಗಳು:

* ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳನ್ನು ಸಶಕ್ತಗೊಳಿಸಲು ಪ್ರಾಯೋಗಿಕ ಚೌಕಟ್ಟನ್ನು ಸೃಷ್ಟಿಸುವುದು. ಯೋಜನೆಯು ಮುಳಬಾಗಿಲು ತಾಲ್ಲೂಕಿನ 30 ಗ್ರಾಮ ಪಂಚಾಯಿತಿಗಳ 389 ಹಳ್ಳಿಗಳ 2.02 ಲಕ್ಷ ನಾಗರೀಕರನ್ನು ತಲುಪಲಿದೆ.
* ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮೈಸೂರು ಇವರ ಅನುಭವ ಮತ್ತು ಕೌಶಲ್ಯ ಬಳಸಿಕೊಂಡು ವಿಶೇಷ ತರಬೇತಿ ಪಠ್ಯಕ್ರಮವನ್ನು ಗ್ರಾಮ ಪಂಚಾಯಿತಿಗಳ ಸಾಂಸ್ಥಿಕ ಅಭಿವೃದ್ಧಿಗೆ ಮತ್ತು ಬೇರೆ ಗ್ರಾಮ ಪಂಚಾಯಿತಿಗಳಲ್ಲಿ ಮರು ಬಳಕೆಗೆ ಸಾಧ್ಯವಾಗುವಂತೆ ಅಭಿವೃದ್ಧಿಪಡಿಸುವುದು.
* ಸಶಕ್ತ ಗ್ರಾಮ ಪಂಚಾಯಿತಿಗಳನ್ನು ತೋರಿಸುವುದು (ಉತ್ತಮ ಪಡಿಸಿದ ಪಾತ್ರಗಳ ಸ್ಪಷ್ಟತೆ, ರಚನೆ, ಸಭೆಗಳ ಪರಿಣಾಮಕಾರಿ ಆಯೋಜನೆ, ಮೂಲ ಸೌಕರ್ಯಗಳ ನಿರ್ವಹಣೆ, ಸಮಗ್ರ ಯೋಜನೆ, ಮತ್ತು ಆಯವ್ಯಯ).
* ಈಗಾಗಲೇ ಸರ್ಕಾರಿ ವ್ಯವಸ್ಥೆಯಲ್ಲಿ ಬಳಕೆಯಲ್ಲಿರುವ ಪ್ಲಾನ್ ಪ್ಲಸ್, ಪಂಚತಂತ್ರ, ಪಂಚಮಿತ್ರ ಇತ್ಯಾದಿ ಸಾಧನಗಳನ್ನು ಬಳಸಿಕೊಂಡು ನಾಗರೀಕರ ಸಹಭಾಗಿತ್ವನ್ನು ಹೆಚ್ಚಿಸುವುದು.

ಈಗಾಗಲೇ ಇರುವಕಾನೂನಿನ ಅವಕಾಶಗಳನ್ನು ಬಳಸಿಕೊಂಡು ಗ್ರಾಮ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಮಧ್ಯೆ ಉತ್ತಮ ಸಂಬಂಧವನ್ನುಹೆಚ್ಚಿಸುವ ಸಲುವಾಗಿ ಶಿಫಾರಸ್ಸುಗಳನ್ನು ಅಭಿವೃದ್ಧಿಪಡಿಸುವುದು.

## ಮುಖ್ಯಾಂಶಗಳು.

**ಯೋಜನೆ ನಿರ್ವಹಣಾ ಸಮಿತಿಯ ರಚನೆ (ಪಿ.ಎಂ.ಸಿ):** ಯೋಜನಾ ನಿರ್ವಹಣಾ ಸಮಿತಿಯು ಯೋಜನೆ ಮತ್ತು ಕಾರ್ಯ ನಿರ್ವಹಣೆ ಜವಾಬ್ದಾರಿಯನ್ನು ಹೊಂದಿದ್ದು ಕೋಲಾರ ಜಿಲ್ಲಾ ಪಂಚಾಯಿತಿ ಕಛೇರಿಯಲ್ಲಿ ಸ್ಥಾಪಿಸಲಾಗಿದೆ. ಯೋಜನಾ ನಿರ್ವಹಣಾ ಸಮಿತಿಯ ಮೊದಲ ಸಭೆಯು ಫೆಬ್ರವರಿ 2015 ರಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಇಲ್ಲಿ ಅವಂತಿಕಾ ಪ್ರತಿಷ್ಠಾನದ ಕಾರ್ಯನಿರ್ವಾಹಕ ಮುಖ್ಯಸ್ಥರು ಭಾಗವಹಿಸಿದ್ದರು. ಈ ಸಮಿತಿಯು ತಿಂಗಳಾಧಾರದಲ್ಲಿ ಯೋಜನಾ ನಿರ್ವಹಣಾ ಸಭೆ ಸೇರಿ ವಿಷಯಗಳ ವಿಶ್ಲೇಷಣೆ ಮತ್ತು ಪರಿಹಾರಗಳನ್ನು ಶೀಘ್ರವಾಗಿ ತೆಗೆದುಕೊಳ್ಳುವುದು ಹಾಗೂ ಕಾರ್ಯ ಯೋಜನೆಗೆ ಬದ್ಧವಾಗಿರುವುದನ್ನು ಖಾತರಿಪಡಿಸಿಕೊಳ್ಳುತ್ತದೆ.




**Illustration of the Project Structure & Partnerships**

* **ರಾಜ್ಯ ಮಟ್ಟದ ಚಾಲನಾ ಸಮಿತಿಯ ಮೊದಲ ತ್ರೈಮಾಸಿಕ ಸಭೆ:** ಚಾಲನಾ ಸಮಿತಿಯು ಸರ್ಕಾರದ ಆದೇಶದ ಮೂಲಕ ಸ್ಥಾಪಿಸಲಾದ ಮುಳಬಾಗಿಲು ಯೋಜನೆಗೆ ಆಲೋಚನಾ ನಾಯಕತ್ವನ್ನು ನೀಡುತ್ತದೆ. ಇದು ಏಪ್ರಿಲ್ 10 2015 ರಂದು ಮೊದಲ ಸಭೆಯನ್ನು ನಡೆಸಿತು. ಈ ಸಭೆಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಶ್ರೀ ಟಿ.ಎಂ.ವಿಜಯಭಾಸ್ಕರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಮತ್ತು ಜಂಟಿ ಕಾರ್ಯದರ್ಶಿ ಪಂಚಾಯತ್ ರಾಜ್ ಮಂತ್ರಾಲಯದಿಂದ ಶ್ರೀಮತಿ ಶಾರದಾ ಮುರಳೀಧರನ್‌ರವರು ಭಾರತ ಸರ್ಕಾರದ ನಾಮ ನಿರ್ದೇಶಿತರಾಗಿ ಹಾಜರಿದ್ದರು. ಶ್ರೀಯುತ ಜುಲ್ಫೀಕರ್‌ಉಲ್ಲಾ, ನಿರ್ದೇಶಕರು, ಪಂಚಾಯತ್ ರಾಜ್, ಆರ್.ಡಿ.ಪಿ.ಆರ್ ಇವರು ಸಭೆಯ ಸಂಯೋಜಕರಾಗಿದ್ದರು.

* **ಸಿಬ್ಬಂದಿ ನೇಮಕ :** 5 ಗ್ರಾ.ಪಂ. ಗಳ ಒಂದು ಗುಂಪಿಗೆ ಒಬ್ಬರಂತೆ 30 ಗ್ರಾ.ಪಂ.ಗಳಲ್ಲಿ ಸಾಂಸ್ಥಿಕ ಅಭಿವೃದ್ಧಿ ಅನುಷ್ಠಾನಕ್ಕಾಗಿ 6 ಕ್ಷೇತ್ರ ಸಹಾಯಕರನ್ನು ಒಬ್ಬ ಸಹಾಯಕ ಯೋಜನಾ ವ್ಯವಸ್ಥಾಪಕರನ್ನು ನೇಮಿಸಲಾಗಿದೆ. ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಗ್ರಾಮ ಪಂಚಾಯಿತಿ ಸಂಸ್ಥೆಗಳ ಅಭಿವೃದ್ಧಿ ಯೋಜನೆಗಾಗಿ ತನ್ನ 6 ಜನ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿದೆ.

**ಗ್ರಾಮ ಪಂಚಾಯಿತಿ ಸಾಂಸ್ಥಿಕ ಅಭಿವೃದ್ಧಿಯ ತರಬೇತಿ ಪಠ್ಯಕ್ರಮದ ಅಭಿವೃದ್ಧಿ:**
ಗ್ರಾಮ ಪಂಚಾಯಿತಿಗಳ ಸಾಂಸ್ಥಿಕ ಅಭಿವೃದ್ಧಿಯ ಚೌಕಟ್ಟನ್ನು ಮರು ಬಳಕೆ ಮಾಡಬಹುದಾದ ಚೌಕಟ್ಟಾಗಿ ವಿನ್ಯಾಸಗೊಳಿಸಲಾಗಿದೆ. ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯೊಂದಿಗೆ ಗುಣಮಟ್ಟದ ಏಳು ತರಬೇತಿ ಪಠ್ಯಕ್ರಮಗಳನ್ನು ಇತರೆ ಗ್ರಾಮ ಪಂಚಾಯಿತಿಗಳಲ್ಲಿ ಮರು ಬಳಕೆಗೆ ಸಹಕಾರಿಯಾಗುವಂತೆ ಅಭಿವೃದ್ಧಿಪಡಿಸಲಾಗುತ್ತಿದೆ.

ಪಠ್ಯಕ್ರಮ–1ನ್ನು ತಯಾರಿಸಿ, ಪ್ರಕಟಿಸಿ ಮುಖ್ಯ ಭಾಗಿದಾರರಿಗೆ ತಲುಪಿಸಲಾಗಿದೆ. (ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕ್ಷೇತ್ರ ಸಹಾಯಕರು, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು) ಇವರು ಗ್ರಾಮ ಪಂಚಾಯಿತಿ ಸಂಸ್ಥೆಗಳ ಅಭಿವೃದ್ಧಿ ಚೌಕಟ್ಟಿನ ಅನುಷ್ಠಾನದ ಜವಾಬ್ದಾರಿಯನ್ನು ಹೊತ್ತಿರುತ್ತಾರೆ.




ಪಠ್ಯಕ್ರಮ–1ರಲ್ಲಿ ಗ್ರಾಮ ಪಂಚಾಯಿತಿಯಲ್ಲಿ ವಾತಾವರಣ ನಿರ್ಮಾಣ ಮತ್ತು ಗ್ರಾಮ ಪಂಚಾಯತಿಗಳ ಸಾಂಸ್ಥಿಕ ಅಭಿವೃದ್ಧಿ ಚೌಕಟ್ಟಿನಲ್ಲಿನ ವಿಷಯಗಳ ಪ್ರಸ್ತಾವನೆ, ಸದಸ್ಯರಿಗೆ ತಿಳುವಳಿಕೆ ಮತ್ತು ವಿವರಣೆ, ಪ್ರತಿ ಪಂಚಾಯಿತಿಯಲ್ಲಿ ಕಲಾ ಜಾಥಾ, ಸಂಕೀರ್ಣ(ಕ್ಲಸ್ಟರ್)ಗಳಲ್ಲಿ ಚೌಕಟ್ಟನ್ನು ಅನುಷ್ಠಾನ ಮಾಡಲು ಸದಸ್ಯರ ಆಯ್ಕೆ. ಪ್ರಸ್ತುತ ಗ್ರಾಮ ಪಂಚಾಯ್ತಿಗಳಲ್ಲಿ ಇರುವ ಪರಿಸ್ಥಿತಿಗಳನ್ನು ತಿಳಿದುಕೊಳ್ಳಲು ಮೂರು ಸಾಧನಗಳಾದ ಸಂಸ್ಥೆ ಮತ್ತು ಭಾಗಿದಾರರ ನಕ್ಷೆ, ತಳಹಂತದ ದತ್ತಾಂಶಗಳ ಸಂಗ್ರಹಣೆ ಹಾಗೂ ಗ್ರಾಮ ಪಂಚಾಯಿತಿಗಳ ಕಾರ್ಯವೈಖರಿಯ ಆಧಾರದಲ್ಲಿ ಅವುಗಳ ಶ್ರೇಣೀಕರಣದ ಬಗ್ಗೆ ಹೆಚ್ಚಿನ ಗಮನವನ್ನು ಕೇಂದ್ರಿಕರಿಸಲಾಗಿದೆ.

ಪಠ್ಯಕ್ರಮ ಅಭಿವೃದ್ಧಿಯ ಕಾರ್ಯಾಗಾರಗಳ ನೇತೃತ್ವದಲ್ಲಿ, ಪಠ್ಯಕ್ರಮಗಳನ್ನು ತಯಾರಿಸಲಾಗುತ್ತಿದೆ. ಇದರಲ್ಲಿ ಪ್ರತಿನಿಧಿಗಳಿಂದ ಸಾಕಷ್ಟು ಗ್ರಾಮ ಪಂಚಾಯಿತಿ ಸಾಂಸ್ಥಿಕ ಅಭಿವೃದ್ಧಿಯ ವಿಶ್ಲೇಷಣೆ ಕುರಿತು ಚರ್ಚೆಗಳು ನಡೆದಿವೆ. ಈ ಕಾರ್ಯಾಗಾರದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರು, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಪೆನಾರ್ಕ್ ಸಂಸ್ಥೆಯ ಮಾನವ ಸಂಪನ್ಮೂಲ ತಜ್ಞರು ಹಾಗೂ ಅವಂತಿಕಾ ಸಂಸ್ಥೆಯ ಸಿಬ್ಬಂದಿ ಹಾಜರಿದ್ದರು.

**ಕೆಳಗಿನ ವೇಳಾ ಪಟ್ಟಿಯಂತೆ ಪಠ್ಯಕ್ರಮ ಅಭಿವೃದ್ಧಿಯ ನಾಲ್ಕು ಕಾರ್ಯಾಗಾರಗಳು ನಡೆದಿವೆ:**

* ಮಾರ್ಚ್ 16–17 ಕ್ರಿಯಾ ಸಂಶೋಧನೆ ಹಂತದ ಗ್ರಾಮ ಪಂಚಾಯಿತಿಗಳ ಸಾಂಸ್ಥಿಕ ಅಭಿವೃದ್ಧಿ ಚೌಕಟ್ಟು ಮತ್ತು ಕಲಿಕೆಗಳ ವಿಮರ್ಶೆ ಕೆಂಗೇರಿಯ ಕೌಶಲ್ಯ ಶಾಲೆಯಲ್ಲಿ ನಡೆಯಿತು.
* ಎಪ್ರಿಲ್ 16–17 ಗ್ರಾಮ ಪಂಚಾಯಿತಿಗಳ ಧ್ಯೇಯ ಮತ್ತು ದೂರದೃಷ್ಟಿ ಹಾಗೂ ಗುರಿಗಳ ಅಭಿವೃದ್ಧಿಗಾಗಿ ತಾತ್ವಿಕ ಮಾದರಿಯ ರಚನೆಯ ಚಿಂತನೆ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ನಡೆಯಿತು.
* ಮೇ 12–14 ಪ್ರಕ್ರಿಯೆ ನಕ್ಷೆಯ ಚೌಕಟ್ಟು ಮತ್ತು ಗ್ರಾಮ ಪಂಚಾಯಿತಿಗಳ ಉತ್ತರದಾಯಿತ್ವ ಸಂರಚನೆಯ ಜೊತೆಗೆ ತಳಹಂತದ ಮಾಹಿತಿ ಸಂಗ್ರಹಣೆ, ಗ್ರಾಮ ಪಂಚಾಯಿಗಳ ಶ್ರೇಣಿಕರಣ ಸಾಧನಗಳ ಅಭಿವೃದ್ಧಿಗೆ ಚೌಕಟ್ಟು ನೀಡಲು ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು ಇಲ್ಲಿ ನಡೆಯಿತು.
* ಜೂನ್ 25–27 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ, ನಿರ್ವಹಣಾ ಚೌಕಟ್ಟಿನಲ್ಲಿ ಬದಲಾವಣೆ ಮತ್ತು ತಂತ್ರಗಳನ್ನು ಕೇಂದ್ರಿಕರಿಸಿ ಕಾರ್ಯಾಗಾರವು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಲ್ಲಿ ನಡೆಯಿತು.

## ಕಲಿಕೆಗಳು ಮತ್ತು ಸವಾಲುಗಳು

ಗ್ರಾಮ ಪಂಚಾಯಿತಿಗಳ ಸಾಂಸ್ಥಿಕ ಅಭಿವೃದ್ಧಿ ಚೌಕಟ್ಟು ಮುಳಬಾಗಿಲು ಯೋಜನೆಯ ಪರಿಕಲ್ಪನೆಯಿಂದಲೇ ಇದು ಒಂದು ಕಲಿಕೆಯ ಪ್ರಕ್ರಿಯೆಯಾಗಿದೆ. ಜುಲೈ 9 2013 ರಂದು ಶ್ರೀ ಟಿ.ಎಂ.ವಿಜಯಭಾಸ್ಕರ, ಅಂದಿನ ಪ್ರಧಾನ ಕಾರ್ಯದರ್ಶಿರವರ ಅಧ್ಯಕ್ಷತೆಯಲ್ಲಿ ರಾಜ್ಯ ಸರ್ಕಾರದ ಯೋಜನಾ ಇಲಾಖೆಗೆ ಚೌಕಟ್ಟನ್ನು ಪ್ರದರ್ಶಿಸಲಾಯಿತು. ಎರಡು ರಾಜ್ಯ ಮಟ್ಟದ ಕಾರ್ಯನಿರ್ವಾಹಕ ಸಮಿತಿಗಳು ಹಾಗೂ ಮೂರು ಕೇಂದ್ರ ಕಾರ್ಯನಿರ್ವಾಹಕ ಸಮಿತಿಗಳ ಸಭೆಯಲ್ಲಿ ಪ್ರಸ್ತಾಪಿಸಿದ ನಂತರ ಯೋಜನೆಯು ಜುಲೈ 8 2014ರಲ್ಲಿ ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನದ ಅಡಿಯಲ್ಲಿ ಮೊದಲ ಪ್ರಾಯೋಗಿಕ ಯೋಜನೆಯಾಗಿ ಒಪ್ಪಿಗೆ ಪಡೆಯಿತು. ಅಂದಿನಿಂದ ನಮ್ಮ ಕಲಿಕೆಯ ಪಯಣವು ಪ್ರಾರಂಭವಾಗಿದೆ. ರಾಜ್ಯ ಸಂಸ್ಥೆಗೆಳೊಂದಿಗೆ ಮುಂದಿನ ಮಾತುಕತೆಯ ನಂತರ ಅವಂತಿಕಾ ಪ್ರತಿಷ್ಠಾನ ಮತ್ತು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಜೊತೆ ಸೌಹಾರ್ದ ಒಪ್ಪಂದ ಪತ್ರಕ್ಕೆ ಸಹಿ ಮಾಡಲಾಗಿದೆ. ಎರಡು ವರ್ಷಗಳ ಯೋಜನೆಯ ಒಟ್ಟು ವೆಚ್ಚವು 2.63 ಕೋಟಿಯಾಗಿದ್ದು, ಅವಂತಿಕ ಪ್ರತಿಷ್ಠಾನವು 62.4 ಲಕ್ಷಗಳನ್ನು ನೀಡುತ್ತದೆ ಮತ್ತು ಉಳಿದ 2.07 ಕೋಟಿಗಳನ್ನು ರಾಜೀವ್ ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನದ ಅಡಿಯಲ್ಲಿ ನೀಡಲಾಗುತ್ತದೆ.

ಜುಲೈ ಮೊದಲ ವಾರದಲ್ಲಿ ಯೋಜನೆಯು 30 ಗ್ರಾಮ ಪಂಚಾಯಿತಿಗಳಲ್ಲಿ ಪ್ರಾರಂಭವಾಗುತ್ತದೆ. ಯೋಜನೆಯ ರಚನೆ ಮತ್ತು ಕ್ಷೇತ್ರಗಳಿಗೆ ಕ್ಷೇತ್ರ ತಂಡಗಳನ್ನು ಸಂಯೋಜಿಸಲು ಆರು ತಿಂಗಳ ಕಾಲಾವಧಿ ತಗುಲಿದೆ. ಪಠ್ಯಕ್ರಮಗಳ ಅಭಿವೃದ್ಧಿಯು ನಿರಂತರ ಪ್ರಕ್ರಿಯೆಯಾಗಿದೆ. ಇಲ್ಲಿ ಗ್ರಾಮ ಪಂಚಾಯಿತಿಗಳ

ಜೊತೆ ಕೆಲಸ ಮಾಡುವ ವಿವಿಧ ಸಂಸ್ಥೆಗಳ ಸಹಯೋಗವನ್ನು ಪಡೆಯಲಾಗಿದೆ. ಭಾರತ ಸರ್ಕಾರದ ಪಂಚಾಯತ್‌ರಾಜ್ ಮಂತ್ರಾಲಯ ಮತ್ತು ರಾಜ್ಯ ಸಂಸ್ಥೆಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಧನಾತ್ಮಕ ಬೆಂಬಲವು ಸ್ಫೂರ್ತಿದಾಯಕವಾಗಿದೆ. ಯೋಜನೆಯನ್ನು ಗ್ರಾಮ ಪಂಚಾಯಿತಿಗಳೊಂದಿಗೆ ಅನುಷ್ಠಾನಗೊಳಿಸಲು ಎದುರು ನೋಡುತ್ತಿದ್ದೇವೆ. ಅವರು ನಿಸ್ಸಂದೇಹವಾಗಿ ಗ್ರಾಮ ಪಂಚಾಯಿತಿ ಸಾಂಸ್ಥಿಕ ಅಭಿವೃದ್ಧಿ ಚೌಕಟ್ಟನ್ನು ಬಲಪಡಿಸಲು ಅಮೂಲ್ಯವಾದ ಒಳನೋಟಗಳನ್ನು, ಅನುಭವಗಳನ್ನು ನೀಡುತ್ತಾರೆ ಎಂಬುದು ನಮ್ಮ ನಂಬಿಕೆಯಾಗಿದೆ.